**ಕರ್ನಾಟಕ ಸರ್ಕಾರ**

ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ,

ಹೊಸ ಸಾರ್ವಜನಿಕ ಕಚೇರಿಗಳು, ನೃಪತುಂಗ ರಸ್ತೆ, ಬೆಂಗಳೂರು–560001

ಸಂಖ್ಯೆ: ಸಿ3(7) ಪ್ರಾ..ಶಿ ವರ್ಗ: 01/2019–20 ದಿನಾಂಕ:–01/06/2019

: ಅಧಿಸೂಚನೆ :

**ವಿಷಯ**:–2018–19ನೇ ಸಾಲಿನ ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರ ವೃಂದದ ವರ್ಗಾವಣಾ ಗಣಕೀಕೃತ ಕೌನ್ಸಿಲಿಂಗ್ ಪ್ರಕ್ರಿಯೆಗಳನ್ನು ಮುಂದುವರೆಸುವ ಬಗ್ಗೆ ಮಾರ್ಗಸೂಚಿಗಳು – ವಿಭಾಗದೊಳಗಿನ ಮತ್ತು ವಿಭಾಗದ ಹೊರಗಿನ ಅಂತರ್–ಘಟಕ ವರ್ಗಾವಣೆಗಳನ್ನು ಆಯಾ ವಿಭಾಗೀಯ ಸಹನಿರ್ದೇಶಕರು ನಿರ್ವಹಿಸುವ ಬಗ್ಗೆ

**ಉಲ್ಲೇಖ**:– 1) "ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) ಅಧಿನಿಯಮಗಳು–2007"ರ (ಎಲ್ಲಾ ತಿದ್ದುಪಡಿಗಳ ಸಹಿತ) (2019ರ ತಿದ್ದುಪಡಿಗಳೂ ಸೇರಿದಂತೆ) ಕಾಯಿದೆಯ ಮತ್ತು ನಿಯಮಗಳು

2) ಪ್ರಾಥಮಿಕ ಶಾಲಾ ಶಿಕ್ಷಕರ ವರ್ಗಾವಣಾ ಮಾರ್ಗಸೂಚಿ ಸಂಖ್ಯೆ : ಸಿ3(7) ಪ್ರಾ..ಶಿ ವರ್ಗ: 01/2019 – 20 ದಿನಾಂಕ 01/06/2019

---*****---

"ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) ಅಧಿನಿಯಮಗಳು ಮತ್ತು ತತ್ಸಬಂಧೀ ನಿಯಮಗಳಲ್ಲಿ **ಅಂತರ್ ಘಟಕ ವರ್ಗಾವಣೆಗಳಿಗೆ ನಿಗದಿಪಡಿಸಿರುವ ಗರಿಷ್ಟ ಮಿತಿ ಶೇಕಡ 3 ಇದೆ. ಇದು ವಿಭಾಗದೊಳಗಿನ ಅಂತರ್–ಘಟಕ ಮತ್ತು ಅಂತರ್ ವಿಭಾಗದ ವರ್ಗಾವಣೆಗಳಿಗೆ ಒಟ್ಟಾಗಿ ನಿಗದಿಪಡಿಸಿರುವ ಮಿತಿಯಾಗಿದೆ.**

**ಪ್ರಾಥಮಿಕ ಶಾಲಾ ಶಿಕ್ಷಕರ ವಿಭಾಗದೊಳಗಿನ ಅಂತರ್–ಘಟಕ ವರ್ಗಾವಣೆಗಳಿಗೆ ಆಯಾ ವಿಭಾಗೀಯ ಸಹನಿರ್ದೇಶಕರು ಮತ್ತು ಅಂತರ್ ವಿಭಾಗೀಯ ಅಂತರ್–ಘಟಕ ವರ್ಗಾವಣೆಗಳಿಗೆ ಬೆಂಗಳೂರು ಆಯುಕ್ತಾಲಯದ ನಿರ್ದೇಶಕರು (ಪ್ರಾಥಮಿಕ ಶಿಕ್ಷಣ), ಇವರು ವರ್ಗಾವಣಾ ಸಕ್ಷಮ ಪ್ರಾಧಿಕಾರಿಯವರಾಗಿರುತ್ತಾರೆ. ಆದರೆ ಅಂತರ–ಘಟಕ ವರ್ಗಾವಣಾ ಮಿತಿಯ ಶೇಕಡವಾರಿನಲ್ಲಿ ವಿಭಾಗದೊಳಗಿನ ಅಂತರ್–ಘಟಕ ಮತ್ತು ವಿಭಾಗದ ಹೊರಗಿನ ಅಂತರ್–ಘಟಕ ವರ್ಗಾವಣೆಗಳಿಗೆ ಪ್ರತ್ಯೇಕ ಶೇಕಡವಾರು ನಿಗದಿಯಾಗದೇ ಇರುವುದರಿಂದ ಪ್ರತ್ಯೇಕವಾಗಿ ಅಂತಹ ವರ್ಗಾವಣೆಗಳನ್ನು ಹಮ್ಮಿಕೊಳ್ಳುವುದು ಸಾಧುವಾಗುವುದಿಲ್ಲ.**

**ಪ್ರಯುಕ್ತ, ಪ್ರಾಥಮಿಕ ಶಾಲಾ ಶಿಕ್ಷಕರ ವರ್ಗಾವಣೆಗಳಿಗೆ ಸಂಬಂಧಪಟ್ಟಂತೆ ಆಯಾ ವಿಭಾಗೀಯ ಸಹ–ನಿರ್ದೇಶಕರು, ಅಂತರ್–ವಿಭಾಗೀಯ ವರ್ಗಾವಣೆ ಪ್ರಕ್ರಿಯೆಯನ್ನೂ ಸಹ ಹಮ್ಮಿಕೊಂಡು ಅಂತರ್–ವಿಭಾಗದ ವರ್ಗಾವಣಾ ಸಂಬಂಧಿತ ಎಲ್ಲ ಕಾರ್ಯಗಳನ್ನು, ಉಲ್ಲೇಖಿತ ಮಾರ್ಗಸೂಚಿಯಂತೆ** ನಿರ್ವಹಿಸಲು ಮತ್ತು ಅಂತಿಮವಾಗಿ ಸಕ್ಷಮ ಪ್ರಾಧಿಕಾರಿಯವರಾದ **ನಿರ್ದೇಶಕರು, ಪ್ರಾಥಮಿಕ ಶಿಕ್ಷಣ ಇವರಿಂದ ಘಟನೋತ್ತರ ಅನುಮೋದನೆಯನ್ನು ಪಡೆದುಕೊಳ್ಳಲು 'ಪ್ರಾಥಮಿಕ ಶಾಲಾ ಶಿಕ್ಷಕರ ವೃಂದದ ಅಂತರ್–ವಿಭಾಗೀಯ ವರ್ಗಾವಣಾ ನಿರ್ವಹಣಾ ಪ್ರಾಧಿಕಾರಿ'** ಎಂಬುದಾಗಿ ನಿಯುಕ್ತಿಗೊಳಿಸಿದೆ.

**(ಡಾ|| ಪಿ.ಸಿ.ಜಾಫರ್, ಭಾ.ಆ.ಸೇ)**
**ಆಯುಕ್ತರು**
**ಸಾರ್ವಜನಿಕ ಶಿಕ್ಷಣ ಇಲಾಖೆ**

ಇವರಿಗೆ,

1) **ಸಹ ನಿರ್ದೇಶಕರು, ಬೆಂಗಳೂರು/ಮೈಸೂರು/ಅಪರ ಆಯುಕ್ತರ ಕಛೇರಿ ಕಲ್ಬುರ್ಗಿ/ಧಾರವಾಡ**
2) **ಸಾರ್ವಜನಿಕ ಶಿಕ್ಷಣ ಇಲಾಖೆಯ ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರು (ಆಡಳಿತ) ರವರಿಗೆ ಮುಂದಿನ ಕ್ರಮಕ್ಕಾಗಿ**
3) **ಕ್ಷೇತ್ರಶಿಕ್ಷಣಾಧಿಕಾರಿಯವರಿಗೆ (ಆಯಾ ಜಿಲ್ಲಾ ಉಪನಿರ್ದೇಶಕರ ಮುಖಾಂತರ)**

**ಪ್ರತಿಯನ್ನು:-**

1. ಸರ್ಕಾರದ ಕಾರ್ಯದರ್ಶಿಗಳು (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ) ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು-1 ಇವರಿಗೆ ವಂದನಾ ಪೂರ್ವಕವಾಗಿ ಸಲ್ಲಿಸಿದೆ.
2. ಆಪ್ತ ಕಾರ್ಯದರ್ಶಿಯವರು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು, ಕರ್ನಾಟಕ ಸರ್ಕಾರ, ವಿಧಾನಸೌಧ, ಬೆಂಗಳೂರು ಇವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
3. ರಾಜ್ಯ ಯೋಜನಾ ನಿರ್ದೇಶಕರು, ಸರ್ವ ಶಿಕ್ಷಣ ಅಭಿಯಾನ/ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ ರಾಜ್ಯ ಯೋಜನಾ ನಿರ್ದೇಶಕರ ಕಛೇರಿ ಬೆಂಗಳೂರು.
4. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳವರಿಗೆ ಮಾಹಿತಿಗಾಗಿ ಕಳುಹಿಸಿದೆ.
5. ಸಹ ನಿರ್ದೇಶಕರು (ಆಡಳಿತ) ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು ಇವರಿಗೆ ಮಾಹಿತಿಗಾಗಿ
6. ಆಪ್ತ ಕಾರ್ಯದರ್ಶಿಯವರು, ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು ಇವರಿಗೆ ಮಾಹಿತಿಗಾಗಿ
7. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಗುಲಬರ್ಗಾ/ಧಾರವಾಡ
8. ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ನಿರ್ದೇಶಕರುಗಳಿಗೆ
9. ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಸಹನಿರ್ದೇಶಕರು ಹಾಗೂ ಪದನಿಮಿತ್ತ ವಿಭಾಗೀಯ ಕಾರ್ಯದರ್ಶಿಗಳು
10. ಸಹ ನಿರ್ದೇಶಕರು, ಮಧ್ಯಾಹ್ನ ಉಪಹಾರ ಯೋಜನೆ, ಕೆ.ಜಿ.ರಸ್ತೆ, ಬೆಂಗಳೂರು.
11. ಮುಖ್ಯಸ್ಥರು, ಇ-ಗೌರ್ನೆನ್ಸ್, ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು-ಪ್ರಸಕ್ತ ವರ್ಗಾವಣೆಗಳಿಗೆ "ತಂತ್ರಾಂಶವನ್ನು" ಸಜ್ಜುಗೊಳಿಸಿ ಅಗತ್ಯ ತಾಂತ್ರಿಕ ಸಹಕಾರವನ್ನು ಒದಗಿಸಲು ಸಂಬಂಧಿತ ತಂಡವನ್ನು ನಿಯೋಜಿಸಲು ಮತ್ತು ವೇಳಾಪಟ್ಟಿಯಂತೆ ಅಗತ್ಯ ಕ್ರಮ ಕೈಗೊಳ್ಳಲು ಕೋರಿದೆ.
12. ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಉಪನಿರ್ದೇಶಕರು (ಅಭಿವೃದ್ಧಿ) ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ (ಡಯಟ್)
13. ರಾಜ್ಯದ ಎಲ್ಲಾ ತಾಲ್ಲೂಕ್ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳವರಿಗೆ
14. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆ, ರವರಿಗೆ ಅಗತ್ಯ ಕ್ರಮಕ್ಕಾಗಿ
15. ಇಲಾಖಾ ವೆಬ್-ಸೈಟ್ನಲ್ಲಿ ಪ್ರಕಟಣೆಗೆ 16. ಕಛೇರಿ ಪ್ರತಿ